2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸ್ಪೇಷಲ್ ಕೇಸ್ ನಂ.518/2025
ಪಿ.ಡಬ್ಲ್ಯೂ: 04
ಸಿ.ಡಬ್ಲ್ಯೂ: 18

ಸಾಕ್ಷಿಯ ಹೆಸರುಃ ಶ್ರೀ. ಮಂಜುನಾಥ ವೆಂಕೋಬಾ ನಾಯಕ
ತಂದೆಯ ಹೆಸರುಃ ವೆಂಕೋಬಾ ನಾಯಕ
ವಯಸ್ಸುಃ 35 ವರ್ಷ
ಉದ್ಯೋಗಃ ಉಪಪೋಲೀಸ್ ನಿರೀಕ್ಷಕರು, ಕಾಕತಿ
ವಾಸಃ ಕಾಕತಿ, ಬೆಳಗಾವಿ

**ದಿನಾಂಕಃ 15.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ 17.06.2025 ರಿಂದ ಇಲ್ಲಿಯವರೆಗೆ ಕಾಕತಿ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

1. ದಿಃ 24.06.2025 ರಂದು ಈ ಪ್ರಕರಣದ ಚಾಸಾಃ 6 ರವರು ಬಂದು ಚಾಸಾಃ 1 ರವರ ದೂರನ್ನು ಸಲ್ಲಿಸಿದ್ದು ಅದನ್ನು ಪಡೆದು ಈ ಪ್ರಕರಣದ ಆರೋಪಿತರು NDPS ಕಾಯ್ದೆ ಕಲಂ 20(b) ಅಡಿಯಲ್ಲಿ ಅಪರಾಧ ಮಾಡಿದ ಬಗ್ಗೆ ಪ್ರಕರಣದ ದಾಖಲಿಸಿಕೊಂಡಿರುತ್ತೇನೆ. ಸಾಕ್ಷಿಯು ಈಗಾಗಲೇ ನಿಪಿಃ 15 ಎಂದು ಗುರುತಾದ ದಾಖಲೆಯನ್ನು ನೋಡಿ ಇದೇ ಆ ದೂರು ಎಂದು ಅದರಲ್ಲಿ ತನ್ನ ಸಹಿ ಇದೆ ಎಂದು ಅದನ್ನು ಈಗ ನಿಪಿಃ 15(ಬಿ) ಎಂದು ಗುರುತಿಸಲಾಯಿತು.

2. ಸಾಕ್ಷಿಯು ಈಗ ಮತ್ತೊಂದು ದಾಖಲೆಯನ್ನು ನೋಡಿ ಅದರಲ್ಲಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ ಅದು ಈ ಪ್ರಕರಣದಲ್ಲಿ ದಾಖಲಾದ ಪ್ರಥಮ ವರ್ತಮಾನ ವರದಿ

ಎಂದು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ನಿಪಿಃ 23 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 23 (ಎ) ಎಂದು ಗುರುತಿಸಲಾಯಿತು.

3. ಸದರಿ ದೂರು ಹಾಗೂ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಪ್ರತಿಯನ್ನು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆಂದು ಹೇಳುತ್ತಾರೆ. ಅದನ್ನು ಕಳುಹಿಸುವ ಮುನ್ನ ಚಾಸಾಃ 1 ರವರೇ ಈ ಪ್ರಕರಣದಲ್ಲಿ ದಾಳಿಯು ಫಲಕಾರಿಯಾಗಿ ಠಾಣೆಗೆ ಹಾಜರಾಗಿ ಈ ಪ್ರಕರಣದಲ್ಲಿ ಅವರು ದಾಳಿ ಮಾಡಲು ಮೇಲಾಧಿಕಾರಿಗಳಿಗೆ ಬರೆದ ಕೋರಿಕೆ, ಅವರು ನೀಡಿದ ಅನುಮತಿ ಪತ್ರ, ಅದೇರೀತಿ ಸಹಾಯಕ ಆಯುಕ್ತರು ಕಂದಾಯ ವಿಭಾಗದವರಿಗೆ ಪತ್ರ ಬರೆದು ಅದರಲ್ಲಿ ಒಬ್ಬರು ಪತ್ರಾಂಕಿತ ಅಧಿಕಾರಿ ಹಾಗೂ ಇಬ್ಬರು ಸರ್ಕಾರಿ ಪಂಚರನ್ನು ದಾಳಿ ಕಾಲಕ್ಕೆ ಹಾಜರು ಮಾಡಲು ಆದೇಶ ಕೋರಿದ ಪತ್ರ ಹಾಗೂ ಮನವಿಯನ್ನು ಮನ್ನಿಸಿ ಮಾಡಿದ ಕಛೇರಿ ಆದೇಶ ಪತ್ರ, ಪತ್ರಾಂಕಿತ ಅಧಿಕಾರಿಗಳಿಗೆ ದಾಳಿ ಕಾಲಕ್ಕೆ ಪತ್ರಾಂಕಿತ ಅಧಿಕಾರಿಯಾಗಿ ಕೋರಿ ನೀಡಿದ ನೋಟಿಸ್, ಅವರು ನೀಡಿದ ಅನುಮತಿ ಪತ್ರ, ಪಂಚರಿಗೆ ನೀಡಿದ ನೋಟಿಸ್ ಹಾಗೂ ಅವರ ಒಪ್ಪಿಗೆ ಪತ್ರಗಳು, ಚಾಸಾಃ 14 ರವರಿಗೆ ದಾಳಿ ಕಾಲಕ್ಕೆ ಮಾದಕ ವಸ್ತುವನ್ನು ತೂಕ ಮಾಡಲು ಡಿಜಿಟಲ್ ಯಂತ್ರ ತಂದು ಹಾಜರಿರಲು ನೀಡಿದ ನೊಟೀಸ್ ಹಾಗೂ ಆತನ ಒಪ್ಪಿಗೆ ಪತ್ರ, ಚಾಸಾಃ 15 ರವರಿಗೆ ದಾಳಿ ಕಾಲಕ್ಕೆ ವಿಡಿಯೋ ಹಾಗೂ ಫೋಟೋಗಳನ್ನು ತೆಗೆಯಲು ನೀಡಿದ ನೋಟೀಸ್ ಹಾಗೂ ಆತನು ನೀಡಿದ ಒಪ್ಪಿಗೆ ಪತ್ರ, ಚಾಸಾಃ 4 ರವರು ಆರೋಪಿತರ ಅಂಗಶೋಧನೆಗೆ ಮಾಡಿದ ಆದೇಶ ಪತ್ರ ಹಾಗೂ ಅಂಗಶೋಧನೆಯನ್ನು ಯಾರ ಮುಂದೆ ಮಾಡಬೇಕು ಎಂದು ಆರೋಪಿತರ ಅಭಿಪ್ರಾಯ ಕೋಡಿ ನೀಡಿದ ನೋಟೀಸ್ ಹಾಗೂ ಅವರ ಒಪ್ಪಿಗೆ ಪತ್ರಗಳು ಹಾಗೂ ಈ ಪ್ರಕರಣದಲ್ಲಿ ಜಪ್ತಾದ ಮಾದಕ ವಸ್ತುವನ್ನು ಜಪ್ತು ಮಾಡುವ ಕಾಲಕ್ಕೆ ಮಾಡಿದ ದಾಳಿ ಪಂಚನಾಮೆಗಳನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಅದೇ ಕಾಲಕ್ಕೆ ದಾಳಿ ಕಾಲಕ್ಕೆ ಜಪ್ತು ಮಾಡಿದ ಮುದ್ದೆ ಮಾಲುಗಳನ್ನು ಹಾಗೂ ಆರೋಪಿತರನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆ ಕಾಲಕ್ಕೆ ದಾಳಿ ಕಾಲಕ್ಕೆ ಮಾಡಿದ ವಿಡಿಯೋ ಇರುವ ಒಂದು ಡಿವಿಡಿ ಹಾಗೂ ಫೋಟೋಗಳನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ.

4. ಸಾಕ್ಷಿಯು ಈಗಾಗಲೇ ನಿಪಿಃ 1 ಎಂದು ಗುರುತಾದ ದಾಖಲೆಯನ್ನು ನೋಡಿ ಇದು ಚಾಸಾಃ 1 ರವರು ಸಹಾಯಕ ಪೋಲೀಸ್ ಆಯುಕ್ತರಿಗೆ ದಾಳಿಗೆ ಅನುಮತಿ ಕೋರಿ ಬರೆದ ಪತ್ರವೆಂದು, ನಿಪಿಃ 2 ಅವರು ನೀಡಿದ ಅನುಮತಿ ಆದೇಶ ಪತ್ರವೆಂದು, ನಿಪಿಃ 3 ದಾಖಲೆಯನ್ನು ನೋಡಿ ಅದು ಸಹಾಯಕ ಆಯುಕ್ತರು ಕಂದಾಯ ಉಪವಿಭಾಗದವರಿಗೆ ನೀಡಿದ ಮನವಿ ಎಂದು, ನಿಪಿಃ 4 ಅವರ ಆದೇಶ ಎಂದು ಗುರುತಿಸುತ್ತಾರೆ. ನಿಪಿಃ 5 ಪತ್ರಾಂಕಿತ ಅಧಿಕಾರಿಗೆ ದಾಳಿ ಕಾಲಕ್ಕೆ ಪತ್ರಾಂಕಿತ ಅಧಿಕಾರಿಯಾಗಿ ಇರಲು ನೀಡಿದ ನೋಟಿಸ ಎಂದು, ನಿಪಿಃ 6 ಅವರು ನೀಡಿದ ಅನುಮತಿ ಪತ್ರ ಎಂದು, ನಿಪಿಃ 7 ಮತ್ತು 8 ನ್ನು ಗುರುತಿಸಿ ಇದು ಈ ಪ್ರಕರಣದ ಪಂಚರಿಗೆ ದಾಳಿ ಪಂಚನಾಮೆ ಕಾಲಕ್ಕೆ ಹಾಜರಿರಲು ನೀಡಿದ ನೋಟೀಸ್ ಗಳು ಎಂದು, ನಿಪಿಃ 9 ಮತ್ತು 10 ಅವರ ಒಪ್ಪಿಗೆ ಪತ್ರಗಳು ಎಂದು ಗುರುತಿಸುತ್ತಾರೆ. ನಿಪಿಃ 11 ಮತ್ತು 12 ನ್ನು ಗುರುತಿಸಿ ಇವು ಚಾಸಾಃ 14 ರವರಿಗೆ ದಾಳಿ ಕಾಲಕ್ಕೆ ತೂಕದ ಯಂತ್ರದ ಜೊತೆಗೆ ಇದ್ದು ಮಾದಕ ವಸ್ತು ಸಿಕ್ಕಿದರೆ ಅದನ್ನು ತೂಕ ಮಾಡಿ ಕೊಡಲು ನೀಡಿದ ನೋಟೀಸ್ ಹಾಗೂ ಒಪ್ಪಿಗೆ ಪತ್ರಗಳು ಎಂದು ಗುರುತಿಸುತ್ತಾರೆ. ನಿಪಿಃ 13 ಮತ್ತು 14 ದಾಖಲೆಗಳನ್ನು ಗುರುತಿಸಿ ಇವು ಈ ಪ್ರಕರಣದ ಚಾಸಾಃ 15 ರವರಿಗೆ ದಾಳಿ ಕಾಲಕ್ಕೆ ಫೋಟೋ ಹಾಗೂ ವಿಡಿಯೋ ಮಾಡಿ ಕೊಡಲು ನೀಡಿದ ನೋಟೀಸ್ ಹಾಗೂ ಒಪ್ಪಿಗೆ ಪತ್ರಗಳು ಎಂದು ಗುರುತಿಸುತ್ತಾರೆ. ನಿಪಿಃ 16 ಎಂದು ಗುರುತಾದ ದಾಖಲೆಯನ್ನು ನೋಡಿ ಇದು ಆರೋಪಿತರಿಗೆ ಅವರ ಅಂಗಶೋಧನೆ ಕಾಲಕ್ಕೆ ಅಂಗಶೋಧನೆಯನ್ನು ಯಾರ ಮುಂದೆ ಮಾಡಬೇಕು ಎಂದು ಅಭಿಪ್ರಾಯ ಕೋರಿ ನೀಡಿದ ನೋಟೀಸ್ ಎಂದು, ನಿಪಿಃ 17 ಮತ್ತು 18 ಆರೋಪಿತರು ತಮ್ಮ ಅಂಗಶೋಧನೆಯನ್ನು ಹಾಜರಿರುವ ಪತ್ರಾಂಕಿತ ಅಧಿಕಾರಿಯ ಮುಂದೆ ಮಾಡಬಹುದು ಎಂದು ನೀಡಿದ ಒಪ್ಪಿಗೆ ಪತ್ರಗಳು ಎಂದು ಗುರುತಿಸುತ್ತಾರೆ.

5. ನಿಪಿಃ 19 ದಾಖಲೆಯನ್ನು ನೋಡಿ ಇದು ಚಾಸಾಃ 1 ರವರು ಈ ಪ್ರಕರಣದಲ್ಲಿ ಮಾಡಿದ ದಾಳಿ ಪಂಚನಾಮೆ ಎಂದು, ನಿಪಿಃ 20 ಎಂದು ಗುರುತಾದ 9 ಫೋಟೋಗಳನ್ನು ನೋಡಿ ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳು ಎಂದು ಗುರುತಿಸುತ್ತಾರೆ. ನಿಪಿಃ 21 ಡಿವಿಡಿಯನ್ನು ನೋಡಿ ಇದು ಈ ಪ್ರಕರಣದ ದಾಳಿ ಕಾಲಕ್ಕೆ ಮಾಡಿದ ವಿಡಿಯೋ ಎಂದು ಗುರುತಿಸುತ್ತಾರೆ. ನಿಪಿಃ 22 ನ್ನು ನೋಡಿ ಇದು ಈ ಪ್ರಕರಣದಲ್ಲಿ ಪತ್ರಾಂಕಿತ

ಅಧಿಕಾರಿಯವರು ಆರೋಪಿತರ ಅಂಗಶೋಧನೆ ಕಾಲಕ್ಕೆ ಮಾಡಿದ ಆದೇಶ ಪ್ರತಿ ಎಂದು ಗುರುತಿಸುತ್ತಾರೆ.

6. ಅದೇದಿನ ಈ ಪ್ರಕರಣದಲ್ಲಿ ಚಾಸಾಃ 1 ರಮರ ಸಲ್ಲಿಸಿದ ಮುದ್ದೆ ಮಾಲುಗಳಾದ ಮಾದಕ ವಸ್ತು, ಆರೋಪಿತರಿಂದ ಜಪ್ತು ಮಾಡಿದ ನಗದು ಹಣ ರೂ.910/-, ಬಿಳಿ ಬಟ್ಟೆಯ ಬ್ಯಾಗ್ ಗಳ ಬಗ್ಗೆ ಮಾಲುಪಟ್ಟಿ ತಯಾರಿಸಿ ವಿಶೇಷ ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತೇನೆ. ಆ ದಿನ ಆರೋಪಿತರನ್ನು ವಿಚಾರಣೆಗೆ ಒಳಪಡಿಸಿದ್ದು ಅವರು ತಮ್ಮ ಸ್ವ-ಖುಷಿ ಹೇಳಿಕೆಗಳನ್ನು ನೀಡಿ ಈ ಪ್ರಕರಣದಲ್ಲಿ ತಾವು ಮಾದಕ ವಸ್ತು ಗಾಂಜಾ ಮಾರಾಟ ಮಾಡುತ್ತಿದ್ದ ಬಗ್ಗೆ ಹೇಳಿಕೆ ನೀಡಿರುತ್ತಾರೆ. ಆ ಕಾಲಕ್ಕೆ ಆರೋಪಿತರನ್ನು ದಸ್ತಗೀರಿ ನಿಯಮಗಳನ್ನು ಪಾಲನೆ ಮಾಡಿ ದಸ್ತಗಿರಿ ಮಾಡಿ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಂಗ ಬಂಧನಕ್ಕೆ ಆದೇಶ ಕೋರಿ ವಿಶೇಷ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆಂದು ಹೇಳುತ್ತಾರೆ. ಅದರಂತೆ ಅವರನ್ನು ನ್ಯಾಯಾಂಗ ಬಂಧನಕ್ಕೆ ಹಾಜರುಪಡಿಸಲಾಯಿತು ಎಂದು ಹೇಳುತ್ತಾರೆ.

7. ಸಾಕ್ಷಿಯು ಈಗ ಎರಡು ದಾಖಲೆಗಳನ್ನು ನೋಡಿ ಇದು ಈ ಪ್ರಕರಣದಲ್ಲಿ ಆರೋಪಿತರು ನೀಡಿದ ಹೇಳಿಕೆ ಎಂದು ಗುರುತಿಸುತ್ತಾರೆ. ಅವುಗಳನ್ನು ಈಗ ನಿಪಿಃ 24 ಮತ್ತು 25 ಎಂದು, ಆರೋಪಿತರ ಸಹಿಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಈಗ ನಿಪಿಃ 24(ಎ) ಮತ್ತು 25(ಎ) ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 24(ಬಿ) ಮತ್ತು 25(ಬಿ) ಎಂದು ಗುರುತಿಸಲಾಯಿತು.

8. ಅದೇದಿನ ನಾನು ಚಾಸಾಃ 1, 5 ರಿಂದ 12, 14 ಮತ್ತು 15 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಚಾಸಾಃ 15 ರವರು ಈ ಪ್ರಕರಣದಲ್ಲಿ ಪಂಚನಾಮೆ ಕಾಲಕ್ಕೆ ಮಾಡಿ ವಿಡಿಯೋ ಹಾಗೂ ಫೋಟೋಗಳ ಬಗ್ಗೆ ನನ್ನ ಮುಂದೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4) ಅಡಿಯಲ್ಲಿ ಪ್ರಮಾಣ ಪತ್ರಗಳನ್ನು ಸಲ್ಲಿಸಿರುತ್ತಾರೆ. ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿಃ 26 ಮತ್ತು 27 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 26(ಎ) ಮತ್ತು 27(ಎ) ಎಂದು ಗುರುತಿಸಲಾಯಿತು.

9. ಮತ್ತೊಂದು ದಾಖಲೆಯನ್ನು ನೋಡಿ ಇದು ಈ ಪ್ರಕರಣದಲ್ಲಿ ವಿಡಿಯೋವನ್ನು ಸಿಡಿಗೆ ವರ್ಗಾಯಿಸುವ ಕಾಲಕ್ಕೆ ದಾಖಲಾದ ಹ್ಯಾಶ್ ವ್ಯಾಲ್ಯೂ ಎಂದು ಗುರುತಿಸುತ್ತಾರೆ. ಅವುಗಳನ್ನು ಈಗ ನಿಪಿಃ 28 ಮತ್ತು 29 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 28(ಎ) ಮತ್ತು 29(ಎ) ಎಂದು ಗುರುತಿಸಲಾಯಿತು.

10. ದಿಃ 26.06.2025 ರಂದು ಮಾಲುಪಟ್ಟಿ ತಯಾರಿಸಿ ಈ ಪ್ರಕರಣದಲ್ಲಿ ತೆಗೆಯಲಾದ ವಿಡಿಯೋ ಸಿಡಿಯ ಬಗ್ಗೆ ವರದಿ ಸಲ್ಲಿಸಿರುತ್ತೇನೆ. ಅದೇದಿನ 4 ನೇ ನ್ಯಾಯಿಕ ದಂಡಾಧಿಕಾರಿಗಳ ಬೆಳಗಾವಿ ರವರಿಗೆ ಮನವಿ ನೀಡಿ ಈ ಪ್ರಕರಣದಲ್ಲಿ ಜಪ್ತಾದ ಮುದ್ದೆ ಮಾಲುಗಳನ್ನು ಇನ್ವೆಂಟರಿ ಮಾಡಿ ಕೊಡಲು ಮನವಿ ನೀಡಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿಃ 30 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 30(ಎ) ಎಂದು ಗುರುತಿಸಲಾಯಿತು. ಮನವಿ ಮಾಡಿದಂತೆ ಅದೇದಿನ ನ್ಯಾಯಿಕ ದಂಡಾಧಿಕಾರಿಗಳು ಈ ಪ್ರಕರಣದಲ್ಲಿ ಜಪ್ತು ಮಾಡಿದ ಮುದ್ದೆ ಮಾಲುಗಳ ಇನ್ವೆಂಟರಿ ತಯಾರಿಸಿ ತಲಾ 50 ಗ್ರಾಂ ತೂಕ ಇರುವ ಎರಡು ಮಾದರಿ ಗಾಂಜಾವನ್ನು ಸಂಗ್ರಹಿಸಿ ಪ್ಯಾಕ್ ಮಾಡಿ ಸೀಲ್ ಮಾಡಿರುತ್ತಾರೆ. ಈ ಬಗ್ಗೆ 52(A)(3) ಅಡಿಯಲ್ಲಿ ಪ್ರಮಾಣ ಪತ್ರಗಳನ್ನು ಸಹ ನೀಡಿರುತ್ತಾರೆ. ಆ ಕಾಲಕ್ಕೆ ಫೋಟೋ ಸಹ ತೆಗೆಸಿರುತ್ತಾರೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಇದು ಅನೆಕ್ಸರ್ I NDPS ಕಾಯ್ದೆ 52(A)(ii) ಅಡಿಯಲ್ಲಿ ನೀಡಿದ ಅನೆಕ್ಸರ ಎಂದು ಗುರುತಿಸುತ್ತಾರೆ. ಅದನ್ನು ಈಗ ನಿಪಿಃ 31 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 31(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮತ್ತೇರಡು ದಾಖಲೆಗಳನ್ನು ನೋಡಿ ಇದು 4 ನೇ ನ್ಯಾಯಿಕ ದಂಡಾಧಿಕಾರಿಗಳ ಬೆಳಗಾವಿ ರವರು ನೀಡಿದ ಪ್ರಮಾಣ ಪತ್ರಗಳು ಎಂದು ಗುರುತಿಸುತ್ತಾರೆ. ಅವುಗಳನ್ನು ಈಗ ನಿಪಿಃ 32 ಮತ್ತು 33 ಎಂದು ಗುರುತಿಸಲಾಯಿತು. ಮತ್ತೊಂದು ದಾಖಲೆಯನ್ನು ನೋಡಿ ಇದು 4 ನೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದ ಮಾದರಿ ಅರಗಿನ ಸೀಲ್ ಗಳು ಎಂದು ಗುರುತಿಸುತ್ತಾರೆ. ಅವುಗಳನ್ನು ಈಗ ನಿಪಿಃ 34 ಎಂದು ಗುರುತಿಸಲಾಯಿತು. 5 ಫೋಟೋಗಳನ್ನು ನೋಡಿ ಇವುಗಳನ್ನು ಇನ್ವೆಂಟರಿ ಕಾಲಕ್ಕೆ ತೆಗೆದ ಫೋಟೋಗಳು ಎಂದು ಗುರುತಿಸುತ್ತಾರೆ. ಅವುಗಳನ್ನು ಈಗ ನಿಪಿಃ 35 ಎಂದು ಗುರುತಿಸಲಾಯಿತು.

11. ಇನ್ವೆಂಟರಿ ಕಾಲಕ್ಕೆ ಚಾಸಾಃ 35 ಫೋಟೋಗಳನ್ನು ತೆಗೆದ ಬಗ್ಗೆ ಚಾಸಾಃ 6 ರವರು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4) ಅಡಿಯಲ್ಲಿ ನೀಡಿದ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಈಗಾಗಲೇ ನಿಪಿಃ 26 ಎಂದು ಗುರುತಾದ ಪ್ರಮಾಣ ಪತ್ರವನ್ನು ನೋಡಿ ಇದೇ ಅದು ಎಂದು ಗುರುತಿಸುತ್ತಾರೆ. ಸಾಕ್ಷಿಯು ಮತ್ತೊಂದು ದಾಖಲೆಯನ್ನು ನೋಡಿ ಇದು ಚಾಸಾಃ 15 ರವರು ದಾಳಿ ಕಾಲಕ್ಕೆ ಮಾಡಿದ ವಿಡಿಯೋದ ಬಗ್ಗೆ ನೀಡಿದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4) ಅಡಿಯಲ್ಲಿ ನೀಡಿದ ಪ್ರಮಾಣ ಪತ್ರ ಎಂದು ಗುರುತಿಸುತ್ತಾರೆ. ಅದನ್ನು ಈಗ ನಿಪಿಃ 36 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 36(ಎ) ಎಂದು ಗುರುತಿಸುತ್ತಾರೆ.

12. ದಿಃ 01.07.2025 ರಂದು ಚಾಸಾಃ 16 ರವರ ಮೂಲಕ ಮಾನ್ಯ ನ್ಯಾಯಿಕ ದಂಡಾಧಿಕಾರಿಗಳು ಇನ್ವೆಂಟರಿ ಕಾಲಕ್ಕೆ ಸಂಗ್ರಹಿಸಿ ನೀಡಿದ ಎರಡು ಮಾದರಿ ಗಾಂಜಾ ಪ್ಯಾಕೇಟಗಳನ್ನು ಪರೀಕ್ಷೆಗಾಗಿ ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯ ಬೆಳಗಾವಿಗೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಇದೇ ನಾನು ಮೇಲೆ ಹೇಳಿದ ವಸ್ತುಗಳನ್ನು ನನ್ನ ಮೇಲಾಧಿಕಾರಿಯ ಕಛೇರಿಯ ಮೂಲಕ ಕಳುಹಿಸಿ ನೀಡಿದ ಮನವಿ ಎಂದು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ನಿಪಿಃ 37 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 37(ಎ) ಎಂದು ಗುರುತಿಸಲಾಯಿತು.

13. ಸಾಕ್ಷಿಯು ಈಗ ಮತ್ತೊಂದು ದಾಖಲೆಯನ್ನು ನೋಡಿ ಇದು ಉಪಪೋಲೀಸ್ ಆಯುಕ್ತರು ಅಪರಾಧ ಮತ್ತು ಸಂಚಾ ವಿಭಾಗದವರು ಈ ಮೇಲೆ ಇನ್ವೆಂಟರಿ ಕಾಲಕ್ಕೆ ಸಂಗ್ರಹಿಸಿದ ಎರಡು ಸ್ಯಾಂಪಲ್ ಗಳನ್ನು ಪರೀಕ್ಷ್ಣಾಗಿ ಮಾಡಿದ ಆದೇಶದ ದೃಢೀಕೃತ ಪತ್ರ ಎಂದು ಗುರುತಿಸುತ್ತಾರೆ. ಅವುಗಳನ್ನು ಈಗ ನಿಪಿಃ 38 ಮತ್ತು 39 ಎಂದು ಗುರುತಿಸಲಾಯಿತು.

14. ದಿಃ 05.07.2025 ರಂದು ಚಾಸಾಃ 16 ರವರು ಸ್ಯಾಂಪಲ್ ಗಳನ್ನು ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ಸಲ್ಲಿಸಿದ ಬಗ್ಗೆ ವರದಿ ಹಾಗೂ ಪ್ರಯೋಗಾಲಯದವರು ನೀಡಿದ ಸ್ವೀಕೃತಿ ಪತ್ರ ಎಂದು ಗುರುತಿಸುತ್ತಾರೆ. ಅವುಗಳನ್ನು ಈಗ

ಕ್ರಮವಾಗಿ ನಿಪಿಃ 40 ಮತ್ತು 41 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 40(ಎ) ಮತ್ತು 41(ಎ) ಎಂದು ಗುರುತಿಸಲಾಯಿತು.

15. ದಿಃ 24.07.2025 ರಂದು ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯ ಬೆಳಗಾವಿ ರವರಿಂದ ಈ ಪ್ರಕರಣದಲ್ಲಿ ಜಪ್ತಾದ ಮಾದಕ ವಸ್ತುವಿನ ಸ್ಯಾಂಪಲ್ ಪ್ಯಾಕೇಟಗಳನ್ನು ಪರೀಕ್ಷಿಸಿ ವರದಿ ನೀಡಿರುತ್ತಾರೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿಃ 42 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 42(ಎ) ಎಂದು ಗುರುತಿಸಲಾಯಿತು.

16. ಅದೇದಿನ ವಿಶೇಷ ನ್ಯಾಯಾಲಯಕ್ಕೆ ಮನವಿ ನೀಡಿ ಈ ಪ್ರಕರಣದಲ್ಲಿ ಮಾದರಿ ಗಾಂಜಾವನ್ನು ಪರೀಕ್ಷೆಗಾಗಿ ಪಡೆದಿದ್ದು ಉಳಿದ ಗಾಂಜಾವನ್ನು ನಾಶಪಡಿಸಲ ಸಕ್ಷಮ ಪ್ರಾಧಿಕಾರದ ಮುಂದೆ ಸಲ್ಲಿಸಲು ಅನುಮತಿ ಕೋರಿದ್ದು ನೀಡಿರುತ್ತಾರೆ. ಸದರಿ ಅನುಮತಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿಃ 43 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 43(ಎ) ಎಂದು ಗುರುತಿಸಲಾಯಿತು.

17. ದಿಃ 02.08.2025 ರಂದು ಉಳಿದ ಗಾಂಜಾವನ್ನು ನಾಶಪಡಿಸಲು ಮಾದಕ ವಸ್ತುಗಳ ವಿಲೇವಾರಿ ಕಮಿಟಿಯ ಅಧ್ಯಕ್ಷರಾದ ಉಪಪೋಲೀಸ್ ಆಯುಕ್ತರು ಅಪರಾಧ ಮತ್ತು ಸಂಚಾರ ವಿಭಾಗದವರಿಗೆ ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿಃ 44 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 44(ಎ) ಎಂದು ಗುರುತಿಸಲಾಯಿತು.

18. ದಿಃ 28.08.2025 ರಂದು ಈ ಪ್ರಕರಣದ ತನಿಖೆ ಮುಗಿದಿದ್ದು ಆ ಕಾಲಕ್ಕೆ ಸಿಕ್ಕ ಸಾಕ್ಷಿಗಳಲ್ಲಿ ಆರೋಪಿತರು NDPS ಕಾಯ್ದೆ ಕಲಂ 20(b)(ii)(B) ಅಡಿಯಲ್ಲಿ ಅಪರಾಧ ಮಾಡಿದ ಬಗ್ಗೆ ಖಾತರಿಯಾಗಿದ್ದು ಅವರ ವಿರುದ್ಧ ಅಂತಿಮ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದು ಹೇಳುತ್ತಾರೆ.

19. ಸಾಕ್ಷಿಯು ಈಗಾಗಲೇ ಮು.ಮಾ. 1 ಎಂದು ಗುರುತಾದ ಒಂದು ಬಟ್ಟೆಯ ಬ್ಯಾಗ್ ನ್ನು ನೋಡಿ ಗುರುತಿಸುತ್ತಾರೆ. ಈಗಾಗಲೇ ಮು.ಮಾ. 2 ಎಂದು ಗುರುತಾದ ರೂ.910/– ನಗದನ್ನು ಗುರುತಿಸುತ್ತೇನೆಂದು ಹೇಳುತ್ತಾರೆ.

20. ಸಾಕ್ಷಿಯು ಈಗ ಅರಗಿನಿಂದ ಸೀಲ್ ಮಾಡಿದ ಎರಡು ಪ್ಯಾಕೇಟಗಳನ್ನು ನೋಡಿ ಇದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ತಲಾ 50 ಗ್ರಾಂ ನಂತೆ ಪ್ಯಾಕ್ ಮಾಡಿ ಕಳುಹಿಸಿದ ಗಾಂಜಾ ಪ್ಯಾಕೇಟಗಳನ್ನು ಎರಡು ಪ್ಯಾಕೇಟಳಲ್ಲಿದ್ದ ಗಾಂಜಾವನ್ನು ಪರೀಕ್ಷಿಸಿ ಉಳಿದ ಗಾಂಜಾವನ್ನು ನನಗೆ ಪ್ಯಾಕ್ ಮಾಡಿ ಸೀಲ್ ಮಾಡಿ ಕಳುಹಿಸಿದ್ದರು ಅದುನ್ನ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆ ಎಂದು ಹೇಳಿ ಎರಡು ಪ್ಯಾಕೇಟಗಳನ್ನು ನೋಡಿ ಗುರುತಿಸುತ್ತಾರೆ. ಅರಗಿನ ಸೀಲ್ ಸಮೇತ ಇರುವ ಎರಡು ಪ್ಯಾಕೇಟಗಳನ್ನು ಈಗ ಕ್ರಮವಾಗಿ ಮು.ಮಾ. 3 ಮತ್ತು 4 ಎಂದು ಗುರುತಿಸಲಾಯಿತು.

21. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಈ ಆಸಾಮಿಗಳನ್ನೇ ಚಾಸಾಃ 1 ರವರು ಹಿಡಿದು ತಂದು ನನ್ನ ಮುಂದೆ ಹಾಜರುಪಡಿಸಿದ್ದು ಎಂದು ಹೇಳುತ್ತಾರೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ದಿಃ 24.06.2025 ರ ಠಾಣಾ ದಿನಚರಿ ಎಂದು ಗುರುತಿಸುತ್ತಾರೆ. ಅದನ್ನು ಈಗ ನಿಪಿಃ 45 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 45(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿ ಪರ ಶ್ರೀ. ಎಂ.ಎಲ್.ಐ. ವಕೀಲರಿಂದಃ**

22. ನಾನು ತನಿಖಾ ಕಾಲಕ್ಕೆ ಘಟನಾ ಸ್ಥಳಕ್ಕೆ ಭೇಟಿ ಕೊಟ್ಟಿರುವುದಿಲ್ಲ. ದೂರು ನೀಡುವ ಕಾಲಕ್ಕೆ ದೂರಿನ ಸತ್ಯಾಸತ್ಯತೆಯನ್ನು ವಿಚಾರಣೆ ಮಾಡಿ ದೂರನ್ನು ಸ್ವೀಕರಿಸುತ್ತೇವೆಂದರೆ ಸರಿ. ಈ ಪ್ರಕರಣದಲ್ಲಿ ದೂರು ನೀಡುವ ಕಾಲಕ್ಕೆ ಅದರ ವಿಚಾರಣೆ ಇನ್ನೂ ಮುಗಿದಿರಲಿಲ್ಲ ಎಂದರೆ ಸರಿ. ದೂರು ಪಡೆದ ನಂತರ ಘಟನಾ ಸ್ಥಳಕ್ಕೆ ಹೋಗಲು ನನಗೇನು ಯಾವುದೇ ಅಡಚಣೆ ಇರಲಿಲ್ಲ ಎನ್ನುವುದು ಸರಿ. ನನ್ನ ಮುಂದೆ ಸಲ್ಲಿಸಿದ ಎಲ್ಲಾ ದಾಖಲೆಗಳ ಮೇಲೆ ಸರಿಯಿದೆ ಎಂದು ಪರಿಶೀಲಿಸಿ ನಾನು ನನ್ನ ಸಹಿ ಮಾಡುತ್ತೇನೆಂದು ಸೂಚಿಸುವುದು ಸರಿಯಲ್ಲ. ನಿಪಿಃ 2 ರಿಂದ 22 ರ ದಾಖಲೆಗಳ ಮೇಲೆ ನನ್ನ ಸಹಿ ಇಲ್ಲ ಎನ್ನುವುದು ಸರಿ. ನಾನು ಈ ಪ್ರಕರಣದಲ್ಲಿ

ದೂರು ದಾಖಲಿಸಿದ ನಂತರ ದೂರು ತಲುಪಿದ 2 ವರೆ ಗಂಟೆಗಳ ನಂತರ ಅದನ್ನು ಸಕ್ಷಮ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆಂದರೆ ಸರಿ. ನಾನು ಈ ಪ್ರಕರಣದಲ್ಲಿ ದಾಳಿ ಕಾಲಕ್ಕೆ ಮಾಡಿ ವಿಡಿಯೋವನ್ನು ನೋಡಿರುವುದಿಲ್ಲ. ನನ್ನ ತನಿಖಾ ಕಾಲಕ್ಕೆ ಚಾಸಾಃ 1 ರವರು NDPS ಕಾಯ್ದೆ ಕಲಂ 50 ರ ನಿಯಮಗಳನ್ನು ಸರಿಯಾಗಿ ಪಾಲಿಸಿಲ್ಲ ಎಂದು ಕಂಡು ಬಂತು ಎಂದರೆ ಸರಿಯಲ್ಲ. ಚಾಸಾಃ 1 ರವರು ತಮಗೆ ಈ ಪ್ರಕರಣದಲ್ಲಿ ಬಂದ ಮಾಹಿತಿಯನ್ನು ನೇರವಾಗಿ ಠಾಣಾ ದಿನಚರಿಯಲ್ಲಿ ನಮೂದಿಸಿದ್ದರು ಅದನ್ನು ನಾನು ಪರಿಶೀಲಿಸಿರುತ್ತೇನೆ.

23. ಈ ಪ್ರಕರಣದಲ್ಲಿ ಜಪ್ತಾದ ಮುದ್ದೆ ಮಾಲುಗಳ್ನು ಸಲ್ಲಿಸಿದ ಕಾಲಕ್ಕೆ ನಾನೇನು ಅದರ ತೂಕದ ನಿಖರತೆಯನ್ನು ಪರೀಕ್ಷಿಸಿಕೊಳ್ಳಲು ಮತ್ತೊಮ್ಮೆ ತೂಕ ಮಾಡಿಸಿರುವುದಿಲ್ಲ ಆದರೆ ಅದನ್ನು ಇನ್ವೆಂಟರಿ ಕಾಲಕ್ಕೆ ಪರಿಶೀಲಿಸಿರುತ್ತೇನೆ. ಮಾಲುಪಟ್ಟಿಯಲ್ಲಿ ಆರೋಪಿತರಿಂದ ಜಪ್ತು ಮಾಡಿದ ಬ್ಯಾಗ್ ಪ್ಲಾಸ್ಟಿಕ್ ಬ್ಯಾಗ್ ಎಂದು ನಮೂದಿಸಿರುತ್ತೇನೆಂದರೆ ಗಾಂಜಾವನ್ನು ಒಂದು ಬಿಳಿ ಪ್ಲಾಸ್ಟಿಕ್ ಕೈಚೀಲದಲ್ಲಿ ಹಾಕಿ ಅದನ್ನು ಒಂದು ಬಿಳಿ ಬಟ್ಟೆಯ ಬ್ಯಾಗ್ ನಲ್ಲಿ ಹಾಕಿ ಆರೋಪಿತರನ್ನು ಹಿಡಿದುಕೊಂಡಿದ್ದರು ಎಂದು ಪಂಚನಾಮೆಯಲ್ಲಿ ನಮೂದಿಸಿದ್ದರಿಂದ ನಾನು ಜಪ್ತು ಮಾಡಿದ 3 ವಸ್ತುಗಳನ್ನು ಪ್ರತ್ಯೇಕವಾಗಿ ಮಾಲುಪಟ್ಟಿಯಲ್ಲಿ ನಮೂದಿಸಿ ವಿಶೇಷ ನ್ಯಾಯಾಲಯಕ್ಕೆ ವರದಿ ನೀಡಿರುತ್ತೇನೆ. ಈ ಪ್ರಕರಣದಲ್ಲಿ ಜಪ್ತಾದ ಮುದ್ದೆ ಮಾಲನ್ನು 72 ಗಂಟೆ ತಡವಾಗಿ ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದೇನೆ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಹೇಳುತ್ತಾರೆ ಈ ಬಗ್ಗೆ ನಾನು ನನ್ನ ಮೇಲಾಧಿಕಾರಿಗಳ ಗಮನಕ್ಕೆ ತಂದು ಅವರ ಆದೇಶಕ್ಕೆ ಕಳುಹಿಸಿರುತ್ತೇನೆಂದು ಹೇಳುತ್ತಾರೆ.

24. ನನ್ನ ತನಿಖಾ ಕಾಲಕ್ಕೆ ಈ ಪ್ರಕರಣದಲ್ಲಿ ಜಪ್ತಾದ ಯಾವುದೇ ಮುದ್ದೆ ಮಾಲಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದು ಕಂಡು ಬಂತು ಎಂದು ಸೂಚಿಸುವುದು ಸರಿಯಲ್ಲ. ನನ್ನ ತನಿಖಾ ಕಾಲಕ್ಕೆ ಆರೋಪಿತರು ಅಮಾಯಕರು ಎಂದು ತಿಳಿದಿದ್ದರೂ ಸಹಿತ ಈ ಪ್ರಕರಣದ ಪಿರ್ಯಾದಿ ನನ್ನ ಮೇಲಾಧಿಕಾರಿಯಾಗಿರುವುದರಿಂದ ಅವರ ಮಾತುಕೇಳಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದು ಸೂಚಿಸುವುದು ಸರಿಯಲ್ಲ. ನಮ್ಮ ಠಾಣಾ

ಅಂಕಿ ಸಂಖ್ಯೆಗೋಸ್ಕರ ಹಾಗೂ ನಮ್ಮ ಮೇಲಾಧಿಕಾರಿಗಳನ್ನು ಮೆಚ್ಚಿಸುವ ಉದ್ದೇಶದಿಂದ ಸುಳ್ಳು ದೂರನ್ನು ಸೃಷ್ಟಿಸಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿ ಅದಕ್ಕೆ ಪೂರಕವೆಂಬಂತೆ ಸುಳ್ಳು ಸಾಕ್ಷ್ಯ ನುಡಿದಿದ್ದೇನೆಂದು ಸೂಚಿಸುವುದು ಸರಿಯಲ್ಲ.

25. ನಿಪಿಃ 45 ರ ಖಂಡಿಕೆ 22 ರಲ್ಲಿ ಒಂದು ಪ್ಲಾಸ್ಟಿಕ್ ಬ್ಯಾಗ್ ನ್ನು ಮಂಜುನಾಥರವರು ಜಪ್ತು ಮಾಡಿದ್ದಾರೆ ಎಂದು ಇದೆ ಎನ್ನುವುದು ಸರಿ. ಸಾಕ್ಷಿ ಮುಂದುವರೆದ ಹೇಳುವುದೇನೆಂದರೆ, ಚಾಸಾಃ 1 ರವರು ದೂರನ್ನು ಒಂದು ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಕಳುಹಿಸಿದ್ದರು ಅದನ್ನು ನಾನು ಖಂಡಿಕೆ 22 ರಲ್ಲಿ ನಮೂದಿಸಿರುತ್ತೇನೆ. ಈ ಪ್ರಕರಣದಲ್ಲಿ ಜಪ್ತಾದ ಗಾಂಜಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದು ಸೂಚಿಸುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.